ಅಧ್ಯಕ್ಷರು.—ಪ್ರಸ್ತಾವ ಏನೆಂದರೆ:''೧೯೮೭ನೇ ಇಸವಿ ಕರ್ನಾಟಕ ಮಾರಾಟ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ

1987ನೇ ಇಸವಿ ಕರ್ನಾಟಕ ಮಾರಾಟ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕಕ್ಕೆ ತಿದ್ದುಪಡಿ ಮಾಡಿರುವಂತೆ ಒಪ್ಪಿಗೆ ನೀಡಲಾಯಿತು.

1987ನೇ ಇಸವಿಯ ಕರ್ನಾಟಕ ವೃಕ್ಷ ಸಂರಕ್ಷಣಾ (ತಿದ್ದುಪಡಿ) ವಿಧೇಯಕ

ಪುರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ಸಚಿವರು).—ಅರಣ್ಯ ಸಚಿವರಾದ ಶ್ರೀ ಬಿ.ಎಸ್. ಬಾಗಲಕೋಟಿ ಅವರ ಪರವಾಗಿ,

ಅಧ್ಯಕ್ಷರೆ, ''ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ೧೯೮೭ನೇ ಇಸವಿಯ ಕರ್ನಾಟಕ ವೃಕ್ಷ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.''

ಪ್ರಸ್ತಾವನೆಯನ್ನು ಪಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಈ ಟ್ರೀಸ್ ಪ್ರಿಸರ್‌ವೇಷನ್ ಆಕ್ಟ್‌ನಲ್ಲಿ ೮ನೇ ಸೆಕ್ಷನ್ ಪ್ರಕಾರ Casuarina ಮತ್ತು Hopea wightigna trees ಮಾತ್ರ ಇದೆ. ಇಷ್ಟನ್ನು ಬೆಳೆದವರು ಅವುಗಳನ್ನು ಕಡಿಯುವುದಕ್ಕೆ ಪರವಾನಿಗೆ ತೆಗೆದುಕೊಂಡು ಅವುಗಳನ್ನು ಕಡಿಯಲು ತಕ್ಕಂತಾದ್ದು ಇದೆ. ಈ ಮರಗಳ ಜೊತೆಗೆ ಬೇರೆ ಮರಗಳನ್ನು ಕೂಡ ರೈತರು ಬೆಳೆದಿದ್ದಾರೆ. ಅವುಗಳನ್ನು ತಮ್ಮ ಸ್ವಂತ ಉಪಯೋಗಕ್ಕೆ ಆ ಮರಗಳನ್ನು ಕಡಿಯಬೇಕಾದರೆ ಪರವಾನಿಗೆ ಬೇಕೆಂದು ಹೇಳುತ್ತಾರೆ. ಈ ಒಂದು ವಿಧೇಯಕದ ಪ್ರಕಾರ ಈಗ ಇರತಕ ಕಾನೂನು ಪ್ರಕಾರ ಪರವಾನಿಗೆ ಅದಕ್ಕೂ ಕೊಡಲಿಕ್ಕೆ ತೊಂದರೆಯಾಗುತ್ತದೆ. ಹೊಸ ಮರಗಳನ್ನು ಬೆಳೆದವರಿಗೆ ಕೂಡ ಈ ರಿಸ್ಟ್ರಿಕ್ಷನ್ ತೆಗೆದು ಬೇರೆ ಜಾತಿ ಮರಗಳನ್ನು ಬೆಳೆದಾಗ ಅವರಿಗೂ ಕೂಡ ಈ ರಿಯಾಯಿತಿ ಸಿಕ್ಕತಕ್ಕ ವ್ಯವಸ್ಥೆ ಇದೆ. ಇದು ರೈತರಿಗೆ ಅನುಕೂಲವಾಗುತ್ತದೆ. ಇದಕ್ಕೆ ಮಾನ್ಯ ಸದಸ್ಯರು ಮನ್ನಣೆ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ೧೯೮೭ನೇ ಇಸವಿಯ ಕರ್ನಾಟಕ ವೃಕ್ಷ ಸಂರಕ್ಷಣಾ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨

ಅಧ್ಯಕ್ಷರು.— ಖಂಡ ೨ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಹಾಗೂ

(ಈ ಖಂಡ ೨ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ ;

ಅಧ್ಯಕ್ಷರು.—**ಪ್ರಸ್ತಾವ ಏನೆಂದರೆ** ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವನ್ನು ಅಂಗೀಕರಿಸಲಾಯಿತು ಹಾಗೂ

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಹಾಗೂ ಸಂಸದೀಯ ಮಂತ್ರಿಗಳು).—೧೯೮೭ನೇ ಇಸವಿಯ ಕರ್ನಾಟಕ ವೃಕ್ಷ ಸಂರಕ್ಷಣಾ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—**ಪ್ರಸ್ತಾವ ಏನೆಂದರೆ** ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ೧೯೮೭ನೇ ಇಸವಿಯ ಕರ್ನಾಟಕ ವೃಕ್ಷ ಸಂರಕ್ಷಣಾ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.—

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮಂತ್ರಿ ಮಂಸೂದೆಗೆ ಒಪ್ಪಿಗೆ ನೀಡಲಾಯಿತು.

ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪಕಾಲಾವಧಿ ಚರ್ಚೆ

ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಶಿಕ್ಷಕರನ್ನು ಹಾಗೂ ಉಪನ್ಯಾಸಕರನ್ನು ಖಾಯಂಗೊಳಿಸುವ ಬಗ್ಗೆ

೭-೩೦ ಪಿ.ಎಂ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗುತ್ತಿಗೆ ಶಿಕ್ಷಕರ ಮತ್ತು ಉಪನ್ಯಾಸಕರ ಜಂಟಿ ಸಮಿತಿಯವರು ನನಗೆ ಒಂದು ಕಾಗದವನ್ನು ಕಳುಹಿಸಿದ್ದಾರೆ. ಅವರು ಉಪವಾಸ ಮಾಡಿ ಮಾಡಿ ಸಾಕಾಗಿದ್ದಾರೆ. ಕಳೆದಸಾರಿ ಅವರು ಉಪವಾಸ ಮಾಡುತ್ತಿದ್ದಾಗ ಮಾನ್ಯ ಮಂಜುನಾಥ್ ರವರು ಎಜುಕೇಷನ್ ಮಿನಿಸ್ಟರ್ ಆಗಿದ್ದರು. ಆಗ ಅವರೂ ಮತ್ತು ನಾವೂ ಹೋಗಿ ಅವರನ್ನು ಭೇಟಿಮಾಡಿ ಎಲ್ಲವನ್ನು ಕೇಳಿ, ನಿಮ್ಮ ಬೇಡಿಕೆಗಳನ್ನು ಕನ್ಸಿಡರ್ ಮಾಡುತ್ತೇವೆಂದು ಹೇಳಿಬಂದಿದ್ದೆವು. ಈಗ ಆ ಸಂಘದವರು ನನಗೆ ಒಂದು ಕಾಗದವನ್ನು ಬರೆದು ಕಳುಹಿಸಿ ಇಷ್ಟು ದಿವಸವಾದರೂ ಆಸೆಂಬ್ಲಿಯಲ್ಲಿ ನಮ್ಮ ವಿಚಾರವನ್ನು ತೆಗೆದುಕೊಳ್ಳಲಿಲ್ಲ, ಈಗ ನಾವು ಜೈಲ್ ಭರೋ ಕಾರ್ಯಕ್ರಮವನ್ನು ನಡೆಸಿ ಜೈಲಿಗೆ ಹೋಗುತ್ತಿದ್ದೇವೆಂದು ತಿಳಿಸಿದ್ದಾರೆ, ಇದನ್ನೆಲ್ಲಾ ನಮ್ಮ ಮಾನ್ಯ ಸದಸ್ಯರಾದ ಬಂಗಾರಪ್ಪನವರೂ ಹೋಗಿ ನೋಡಿಕೊಂಡು ಬಂದಿದ್ದಾರೆ. ಅವರೆಲ್ಲರನ್ನೂ ಪೋಲೀಸರು ವ್ಯಾನ್‌ನಲ್ಲಿ ತುಂಬಿಕೊಂಡು ಜೈಲಿಗೆ ತೆಗೆದುಕೊಂಡು ಹೋಗಿದ್ದಾರೆ. ಆದ್ದರಿಂದ ಸರ್ಕಾರ ಕೂಡಲೇ ಈ ಬಗ್ಗೆ ಗಮನಕೊಡಬೇಕು. ಹಿಂದೆ ಅವರಿಗೆ ಕೊಟ್ಟಿದ್ದ ಭರವಸೆಯಂತೆ ರೋಸ್ಟರ್ ಪ್ರಕಾರವೋ, ಮಾಸಲಾತಿ ಪ್ರಕಾರವೋ ಅಥವಾ ಇನ್ನೂ ಬೇರೆ ಯಾವುದಾದರೂ ರೀತಿಯಲ್ಲಿ ಅವರ ವಿಚಾರವನ್ನು ಪರಿಶೀಲಿಸಿ ಅವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು, ಭೂಪತಿ —ಮಾನ್ಯ ಅಧ್ಯಕ್ಷರೆ, ಈ ವಿಚಾರ ಮೊನ್ನೆಯೇ ಚರ್ಚೆಗೆ ಬರಬೇಕಾಗಿತ್ತು. ಸುಮಾರು ೨ ದಿವಸ ಕಳೆದಮೇಲೆ ಈಗ ಇದು ಚರ್ಚೆಗೆ ಬಂದಿದೆ. ಗುತ್ತಿಗೆ ಆಧಾರದಮೇಲೆ ಕೆಲಸ ಮಾಡತಕ್ಕ ಶಿಕ್ಷಕರು, ಉಪನ್ಯಾಸಕರು ಕಳೆದ ೩ ದಿವಸದಿಂದ ಮುಷ್ಕರ ಮಾಡಿರತಕ್ಕ ವಿಚಾರ ತಮಗೂ ಗೊತ್ತಿದೆ. ೧೦,೪೦೦ ಜನರು ಈ ನಮ್ಮ ಇಡೀ ಕರ್ನಾಟಕ ರಾಜ್ಯದಲ್ಲಿ ೧೯೮೪ನೇ ಇಸವಿಯಿಂದಲೂ